

ಜಗಳವಾಡಿ ಕೋಪಿಸಿಕೊಂಡು ಹೋದ ಪತ್ನಿಯ ತವರಿಗೆ ಪತಿ ಪ್ರತಿ ದಿನ ಫೋನ್ ಕರೆ ಮಾಡುತ್ತಾನೆ...

ಅತ್ತೆ: ಎಷ್ಟು ಬಾರಿ ಹೇಳಲಿ ನಿಮಗೆ, ಅವಳು ಮುನಿಸಿಕೊಂಡಿದ್ದಾಳೆ. ಇನ್ನು ಯಾವತ್ತೂ ನಿಮ್ಮ ಬಳಿ ಬರುವುದಿಲ್ಲವೆಂದು... ಆದರೂ ದಿನಾ ಯಾಕೆ ಫೋನ್ ಮಾಡ್ತೀರಾ?

ಅಳಿಯ: ಕೇಳಿದಷ್ಟೂ ಖುಷಿಯಾಗುತ್ತದೆ ಅತ್ತೆಯವರೇ...!

★★★

ಇಂದಿನ ಯುವ ಪೀಳಿಗೆಯ ಯಾರೇ ಆದರೂ ಬೆಳಿಗ್ಗೆ ಬೇಗ ಹಾಸಿಗೆಯಿಂದ ಏಳುತ್ತಿಲ್ಲವಾದರೆ ಅವರನ್ನೆಬ್ಬಿಸಲು ಹೊಸ ವಿಧಾನವೊಂದಿದೆ...

ಸನಿಹ ಹೋಗಿ ಅವರ ಕಿವಿಯಲ್ಲಿ. 'ನಿನ್ನಪ್ಪ ನಿನ್ನ ಮೊಬೈಲ್ ಪರಿಶೀಲಿಸುತ್ತಿದ್ದಾರೆ...' ಎಂದಷ್ಟೇ ಮೆಲ್ಲನುಸುರಿ ಬಿಡಿ. ಚಂಗನೆದ್ದು ಬಿಡುವರು!

★★★

ಪುಟ್ಟ: ಕಂಪ್ಯೂಟರ್ ಏಕೆ ಸ್ಮಾರ್ಟ್ ಆಗಿರುತ್ತದೆಯಮ್ಮ?

ಅಮ್ಮ: ಏಕೆಂದರೆ ಅವು ಮದರ್ ಬೋರ್ಡ್‌ನ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸುತ್ತವೆ. ನೀನೂ ಅಮ್ಮನ ಸೂಚನೆಗಳನ್ನು ಪಾಲಿಸಿದರೆ ಸ್ಮಾರ್ಟ್ ಆಗ್ಬಹುದು ಕಣೋ...

★★★

ಅಪ್ಪನಿಂದ ಮಗನಿಗೊಂದು ಹೃದಯಸ್ಪರ್ಶಿ ಸಂದೇಶ

ಪ್ರೀತಿಯ ಮಗನೇ... ನಿನ್ನ ಅಪ್ಪ, ಅಮ್ಮ ಮತ್ತು ಗುರುಗಳು ತುಂಬಾ ಶಿಸ್ತಿನವರೆಂದೂ ವೃಥಾ ನಿನ್ನನ್ನು ಹಿಂಸಿಸುತ್ತಿರುವರೆಂದೂ ನಿನಗನ್ನಿಸುತ್ತಿದ್ದರೆ, ನಿನಗೊಬ್ಬಳು ಪತ್ನಿ ಬರುವವರೆಗೆ ಕಾದು, ಆ ಮೇಲೆ ನೋಡು...!

★★★

ಶಾಲೆಯಲ್ಲೊಂದು ಅನೌನ್ಸ್‌ಮೆಂಟ್

ಗೇಟಿನ ಎದುರು ತಮ್ಮ ಸೈಕಲ್‌ಗಳನ್ನು ನಿಲ್ಲಿಸಿರುವ ವಿದ್ಯಾರ್ಥಿಗಳು ದಯವಿಟ್ಟು ಅವುಗಳನ್ನು ಪಾರ್ಕಿಂಗ್ ಪ್ರದೇಶದಲ್ಲಿಡಬೇಕು.

30 ನಿಮಿಷಗಳ ನಂತರ ಇನ್ನೊಂದು ಅನೌನ್ಸ್‌ಮೆಂಟ್: '10 ಸೈಕಲ್‌ಗಳನ್ನು ಸ್ಥಳಾಂತರಿಸಲು ಹೋದ ಎಲ್ಲಾ 100 ವಿದ್ಯಾರ್ಥಿಗಳು ತಕ್ಷಣ ಹಿಂತಿರುಗಿ ತರಗತಿಗೆ ಬರತಕ್ಕದ್ದು!'

★★★

ಪತ್ನಿ ತನ್ನ ಪತಿಯ ಚಿತೆಯ ಬಳಿ ರೋದಿಸುತ್ತಾ ನಿವೇದಿಸಿದಳು: ಚಿಕ್ಕ ಮಗ ಲ್ಯಾಪ್ ಟಾಪ್ ಕೇಳುತ್ತಿದ್ದಾನೆ, ಏನು ಮಾಡಲಿ? ಮಗಳು ಮೊಬೈಲ್‌ಗಾಗಿ ಹಠ ಹಿಡಿದಿದ್ದಾಳೆ, ನಾನೇನು ಮಾಡಲಿ?

ನನ್ನ ಸೀರೆಯೂ ಹಳತಾಗಿ ಹೋಗಿದೆ, ಏನು ಗತಿ?

ಅಷ್ಟರಲ್ಲಿ ಚಿತೆಯೊಳಗಿಂದ ಗೊರ ಗೊರ ಸದ್ದೊಂದು ಹೊರಬಿತ್ತು: 'ಸತ್ತು ಹೋಗಿದ್ದೇನೆ... ದುಬಾಯಿಗೆ ಹೋಗಿಲ್ಲ...!'

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

---



**ಬಿದ್ದ ಸದ್ದು**

ಹೆಂಡ್ತಿ: ರಾತ್ರಿ ಮಂಚದಿಂದ ಏನೋ ಬಿದ್ದಂತೆ ಸದ್ದಾಯ್ತು

ಗುಂಡ: ರಗ್ಗು ಬೆಡ್‌ಶೀಟ್ ಕಣೆ

ಹೆಂಡ್ತಿ: ಅದಕ್ಕೆ ಅಷ್ಟೊಂದು ಶಬ್ದಾನಾ?

ಗುಂಡ: ಅದರೊಳಗೆ ನಾನೂ ಇದ್ದೆ.

★★★

**ಲೈಕಿಂಗ್ ಬಂದಿದೆ**

ಪತಿ: ಏನೇ ಇದು?

ಪತ್ನಿ: ಏನಾಯ್ತು ರೀ

ಪತಿ: ಇದೇನೆ?

ಪತ್ನಿ: ಅಯ್ಯೋ ಕಾಣ್ತಿಲ್ವ

ಪತಿ: ಆಹಾ ಇದಕ್ಕೇನೆ, ಉಪ್ಪಿಲ್ಲ ಖಾರ ಇಲ್ಲ

ಪತ್ನಿ: ನೀವೊಬ್ರೆ ನೋಡ್ರಿ ಹೀಗೆ ಹೇಳಿದ್ದು

ಪತಿ: ನೀ ಮಾಡಿದ ಪಲ್ಯ ಬೇರೆಯವರಿಗೆ ಹೇಗೆ ಗೊತ್ತು?

ಪತ್ನಿ: ಹಂಗಲ್ಲರೀ ಇದನ್ನು ಫೇಸ್‌ಬುಕ್‌ನಲ್ಲಿ ಹಾಕಿದ್ದೆ. 500 ಲೈಕಿಂಗ್, 100 ಬಾಯಲ್ಲಿ ನೀರು ಬರುತ್ತೆ ಅಂತ ಕಳಿಸಿದಾರೆ!

★★★

**ಹುಡುಕಿ ಕೊಡಿ**

ಗುಂಡ: ಸರ್ ಕಂಪ್ಲೇಂಟ್ ತೆಗೆದು ಕೊಳ್ಳಿ.

ಇನ್ಸ್‌ಪೆಕ್ಟರ್: ಏನದು ಕಂಪ್ಲೇಂಟು?

ಗುಂಡ: ಸರ್ ನನ್ನ ಗೆಳೆಯನ ಹೆಂಡತಿ ಕಣ್ಮರೆಯಾಗಿದ್ದಾಳೆ.

ಇನ್ಸ್‌ಪೆಕ್ಟರ್: ಅದಕ್ಕೆ ನಿಮ್ಮ ಗೆಳೆಯ ಕಂಪ್ಲೇಂಟ್ ಕೊಡಲಿ, ನೀವೇಕೆ?

ಗುಂಡ: ಅದಕ್ಕಲ್ಲ ಸರ್, ಆತನ ಹೆಂಡತಿ ಕಾಣೆಯಾದಾಗಿನಿಂದ ಸಂತೋಷದಿಂದ ಕುಣಿದು ಕುಪ್ಪಳಿಸುತ್ತಿದ್ದಾನೆ. ಆಕೆಯನ್ನು ಬೇಗ ಹುಡುಕಿಕೊಡಿ, ಅವನಿಗೆ!

**(ಸಂಗ್ರಹ) ಕುಬೇರಪ್ಪ. ಎಂ. ವಿಭೂತಿ, ಹರಿಹರ**